# ಹಕ್ಕುಗಳು ಹಾದಿ ತಪ್ಪಬಲ್ಲವೇ? - ಭಾರತದಲ್ಲಿ ಶಿಕ್ಷಣದ ಹಕ್ಕಿನ ಸಮಸ್ಯೆ

ಲೇಖಕರು: ವಿಮಲಾ ರಾಮಚಂದ್ರನ್

ಮೂಲ: ಇಂಡಿಯಾ ಇಂಟರ್ನ್ಯಾಷನಲ್ ಸೆಂಟರ್ ತ್ರೈಮಾಸಿಕ, ಗ್ರೀಷ್ಮ ಋತು 12, ಸಂಪುಟ 39, ಸಂಚಿಕೆ 1 (ಗ್ರೀಷ್ಮ ಋತು 2012), ಪುಟಗಳು 56-63
ಪ್ರಕಟಣೆ: – ಇಂಡಿಯಾ ಇಂಟರ್ನ್ಯಾಷನಲ್ ಸೆಂಟರ್
Stable URL: http://www.jstor.com/stable/41804019

ಎರಡು ದಶಕಗಳ ಕಾಲ ಚರ್ಚೆಗೊಳಗಾದ ಶಿಕ್ಷಣದ ಹಕ್ಕಿನ (ಆರ್‌ಟಿಇ) ಮಹತ್ವಾಕಾಂಕ್ಷಿ ಶಾಸನದ ಬಗ್ಗೆ ಬಹಳಷ್ಟನ್ನು ಹೇಳಲಾಗಿದೆ. ಇದು ನಿಜಕ್ಕೂ ಭಾರತದ ಶಿಕ್ಷಣ ಕ್ಷೇತ್ರದಲ್ಲಿ ಒಂದು ಮೈಲಿಗಲ್ಲು ಎಂಬುದರ ಬಗ್ಗೆ ಯಾವ ಸಂಶಯವೂ ಇಲ್ಲ. ಆದರೂ ಸಹ ಎಷ್ಟೋ ಸಂದರ್ಭಗಳಲ್ಲಿ ಕಂಡುಬರುವಂತೆ ಸದುದ್ದೇಶಗಳೇ ಪರ್ಯಾಪ್ತವಲ್ಲ. ಎಲ್ಲ ಮಕ್ಕಳಿಗೂ ಕನಿಷ್ಠ ಎಂಟು ವರ್ಷಗಳ ಪ್ರಾಥಮಿಕ ಶಿಕ್ಷಣದ ಹಕ್ಕು ದೊರಕುವುದನ್ನು ಖಾತ್ರಿ ಪಡಿಸುವಲ್ಲಿ ಅದರ ಪರಿಣಾಮಕಾರಿತ್ವಕ್ಕೆ ನಿಜವಾದ ಪರೀಕ್ಷೆ ಇರುವುದು, ನಾವು ಸರ್ಕಾರಿ ಶಾಲೆಗಳನ್ನು ವ್ಯವಸ್ಥೆಗೊಳಿಸುವ ರೀತಿಯಲ್ಲಿ.

ನಾವೊಂದು ವಿರೋಧಾಭಾಸದ ಸನ್ನಿವೇಶದಲ್ಲಿದ್ದೇವೆ; ಅದೆಂದರೆ ನಮ್ಮ ಮಕ್ಕಳಲ್ಲಿನ ಬಹುಸಂಖ್ಯಾತ ಭಾಗವು ಸರ್ಕಾರಿ ಶಾಲೆಗಳಲ್ಲಿರುವಾಗ, ಶೈಕ್ಷಣಿಕ ಸಮುದಾಯ ಮತ್ತು ಮಾಧ್ಯಮಗಳು ಖಾಸಗಿ ಶಾಲೆಗಳಲ್ಲಿ ಶೇಕಡಾ 25ರಷ್ಟು ಸೀಟುಗಳ ಕುರಿತಂತೆ ಬಿರುಸಾಗಿ ಚರ್ಚೆ ನಡೆಸುತ್ತಿವೆ. ಸ್ವತಂತ್ರ ಮೂಲಗಳು ಒದಗಿಸಿರುವ ಇತ್ತೀಚಿನ ಅಂಕಿ ಅಂಶಗಳ ಪ್ರಕಾರ (ಶಿಕ್ಷಣದ ವಾರ್ಷಿಕ ಸ್ಥಿತಿಯ ವರದಿ, 2011), 6ರಿಂದ 14 ವರ್ಷ ವಯಸ್ಸಿನ ಮಕ್ಕಳಲ್ಲಿ ಶೇಕಡಾ 70ರಷ್ಟು ಭಾಗವು ಸರ್ಕಾರಿ ಶಾಲೆಗಳಲ್ಲಿ ಓದುತ್ತಿದ್ದರೆ, ಕೇವಲ ಶೇಕಡ 26 ಭಾಗ ಮಾತ್ರ ಖಾಸಗಿ ಶಾಲೆಗಳಲ್ಲಿ ಓದುತ್ತಿದ್ದಾರೆ. ಸ್ವತಃ ಕಾಯಿದೆಯೇ ಖಾಸಗಿ ಶಾಲೆಗಳಲ್ಲಿ ಅನುಸರಿಸಬೇಕಾದ ಮೂಲಭೂತ ವ್ಯವಸ್ಥೆ ಹಾಗೂ ಶಿಕ್ಷಕ-ವಿದ್ಯಾರ್ಥಿ ಅನುಪಾತಕ್ಕೆ ಸಂಬಂಧಿಸಿದಂತೆ ಕಟ್ಟುನಿಟ್ಟಿನ ನಿಯಮಗಳನ್ನು ರೂಪಿಸಿದ್ದರೂ, ನಮ್ಮ ಗ್ರಾಮೀಣ ಶಾಲೆಗಳಲ್ಲಿ ಒಬ್ಬರು ಅಥವಾ ಇಬ್ಬರು ಅಧ್ಯಾಪಕರಿದ್ದಾರೆ ಮತ್ತು ಐದು ತರಗತಿಗಳಿಗೆ ಎರಡು ಅಥವಾ ಹೆಚ್ಚೆಂದರೆ ಮೂರು ಕೊಠಡಿಗಳು ಮಾತ್ರ ಇವೆ. ಆಟದ ಮೈದಾನ, ಶೌಚಾಲಯ ಮತ್ತು ಗ್ರಂಥಾಲಯಗಳು ಇರುವುದರ ಬಗ್ಗೆ ಶಾಲಾ ಮಾಹಿತಿಯಲ್ಲಿ ತೋರಿಸಲಾಗಿರುತ್ತದೆ. ಆದರೆ ಕ್ಷೇತ್ರಾಧಾರಿತ ಅಧ್ಯಯನಗಳು, ನಿಷ್ಕ್ರಿಯ ಶೌಚಾಲಯಗಳು, ಪ್ರಾಕಾರದ ಗೋಡೆಗಳಿಲ್ಲದ ಆಟದ ಮೈದಾನಗಳು ಮತ್ತು ಬೀಗ ಜಡಿದಿರುವ ಗ್ರಂಥಾಲಯಗಳನ್ನು ಪದೇಪದೇ ಎತ್ತಿ ತೋರಿಸಿವೆ. ಸರ್ಕಾರಿ ಶಾಲೆಗಳಿಗೆ ಹೋಗುವವರಾದರೂ ಯಾರು? ರಾಷ್ಟ್ರೀಯ ಮಾದರಿ ಸರ್ವೇಕ್ಷಣಾ ಸಂಘಟನೆಯ (ಎನ್‌ಎಸ್‌ಎಸ್‌ಒ), 64ನೇ ಸುತ್ತಿನ ವರದಿಯು ನಮ್ಮ ಆತಂಕಗಳನ್ನು ದೃಢೀಕರಿಸಿದೆ. ತೀವ್ರ ಆರ್ಥಿಕ ಬಡತನದ ಚತುರ್ಥಕದ ಸುಮಾರು ಶೇಕಡಾ 84ರಷ್ಟು ಜನ ಸರ್ಕಾರದ ಅಥವಾ ಸರ್ಕಾರದ ಅನುದಾನ ಪಡೆದ ಶಾಲೆಗಳಲ್ಲಿ ಓದುತ್ತಾರೆ. ನಾವು ಆರ್ಥಿಕ ಸ್ಥಾನ-ಮಾನದಲ್ಲಿ ಮೇಲಕ್ಕೆ ಸಾಗುತ್ತಿದ್ದಂತೆ ಸರ್ಕಾರಿ ಶಾಲೆಗಳಿಗೆ ಹೋಗುವ ಮಕ್ಕಳ ಪ್ರಮಾಣವು ಕಡಿಮೆಯಾಗುತ್ತಾ ಹೋಗುತ್ತದೆ ಮತ್ತು ಖಾಸಗಿ ಶಾಲೆಗಳಿಗೆ ಹೋಗುವ ಮಕ್ಕಳ ಪ್ರಮಾಣವು ಹೆಚ್ಚಾಗುತ್ತದೆ. ಇದನ್ನು ನಾವು ಕೊಂಚ ಆಳವಾಗಿ ಪರಿಶೀಲಿಸಿದಲ್ಲಿ, ಖಾಸಗಿ ಶಾಲೆಗಳಿಗೆ ಹೋಗಲು ಸಾಧ್ಯವಾಗುವ ಬಡವರು ಸಹ, ಬೋಧನೆಯ ಗುಣಮಟ್ಟ ಸರ್ಕಾರಿ ಶಾಲೆಗಳಿಗಿಂತ ಕೊಂಚ ಉತ್ತಮವಿದ್ದು, ಮೂಲಸೌಕರ್ಯವು ಇನ್ನೂ ಕೆಟ್ಟದಾಗಿರುವ 'ಕಡಿಮೆ ವೆಚ್ಚದ' ಖಾಸಗಿ ಶಾಲೆಗಳಿಗೆ ಹೋಗುತ್ತಾರೆ. ಅತ್ಯಲ್ಪ ಅಲಪಸಂಖ್ಯಾತರು ಶೇಕಡ 25ರಷ್ಟು ಮೀಸಲಾತಿಗೆ ಸಂಬಂಧಿಸಿದಂತೆ ಸುದ್ದಿಯಲ್ಲಿರುವ ಉತ್ತಮ ಸೌಲಭ್ಯವಿರುವ ಶಾಲೆಗಳಿಗೆ ಹೋಗುತ್ತಾರೆ.

ನಾನು ಖಾಸಗಿ ಶಾಲೆಗಳ ಪರವಾಗಿ ವಕಾಲತ್ತು ಮಾಡುತ್ತಿಲ್ಲ. ಸರ್ಕಾರವು ತನ್ನ ಗಮನವನ್ನು ಸರ್ಕಾರಿ ಶಾಲೆಗಳ ಮೇಲೆ ಕೇಂದ್ರೀಕರಿಸಿ, ಪ್ರತಿಯೊಂದು ಶಾಲೆಯೂ ಶಿಕ್ಷಣದ ಹಕ್ಕಿನ ಗುಣಮಟ್ಟಗಳಿಗೆ ಬದ್ಧವಾಗಿದ್ದು, ಉತ್ತಮ ಕಾರ್ಯನಿರ್ವಹಣೆಯ ಆರಂಭವನ್ನು ಖಾತ್ರಿಪಡಿಸಿಕೊಂಡಾಗ ಮಾತ್ರವೇ ಶಿಕ್ಷಣದ ಹಕ್ಕನ್ನು ಕಾರ್ಯಾನ್ವಿತಗೊಳಿಸಬಹುದು. ಅನೇಕ ದಶಕಗಳಿಂದಲೂ ಆರೋಗ್ಯ ಮತ್ತು ಶಿಕ್ಷಣದ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿರುವ ಜನರು ಸರ್ಕಾರಿ ಸೇವೆಗಳು ಮಾನದಂಡವನ್ನು ಒದಗಿಸುತ್ತವೆಯೆಂದು ಹೇಳುತ್ತಲೇ ಬಂದಿದ್ದಾರೆ. ಎಲ್ಲಿ ಸರ್ಕಾರಿ ಆಸ್ಪತ್ರೆಗಳು ತಮ್ಮ ಕಾರ್ಯಭಾರವನ್ನು ನಿರ್ವಹಿಸಿ, ಉತ್ತಮ ಗುಣಮಟ್ಟದ ಆರೈಕೆಯನ್ನು ಒದಗಿಸುತ್ತವೆಯೋ ಅಲ್ಲಿ ಖಾಸಗಿ ಆಸ್ಪತ್ರೆಗಳು ವಿಪರೀತ ಸುಲಿಗೆ ಮಾಡುವುದಾಗಲೀ, ನಿರ್ಲಕ್ಷ್ಯದಿಂದ ಇರುವುದಾಗಲೀ ಸಾಧ್ಯವಾಗುವುದಿಲ್ಲ. ಎಲ್ಲಿ ಸರ್ಕಾರಿ ಆಸ್ಪತ್ರೆಗಳು ಆರೋಗ್ಯವನ್ನು ಒದಗಿಸುವ ವ್ಯವಸ್ಥೆಯು ಕುಸಿದಿದ್ದು, ಭ್ರಷ್ಟಾಚಾರದಿಂದ ತುಂಬಿದೆಯೋ ಅಲ್ಲಿ ಖಾಸಗಿ ಕ್ಷೇತ್ರವು ಅಲ್ಪ ಪ್ರಮಾಣದ ಉತ್ತಮ ಸೇವೆಗಳನ್ನು ಒದಗಿಸಿದಾಗಲೂ ಸಹ ಮುಂಚೂಣಿಗೆ ಬಂದಿದೆ. ಬಹುತೇಕ ಎಲ್ಲ ಸಮಾಜಸೇವಾ ಕ್ಷೇತ್ರಗಳಲ್ಲೂ ಸರ್ಕಾರ ಏನನ್ನು ಒದಗಿಸುತ್ತದೆ ಮತ್ತು ಖಾಸಗಿ ಕ್ಷೇತ್ರದಲ್ಲಿ ಏನು ಲಭ್ಯವಿದೆ ಎಂಬುದರ ನಡುವೆ ನಿಕಟ ಸಂಬಂಧವಿದೆ. ಆದ್ದರಿಂದ ಸರ್ಕಾರಿ ವ್ಯವಸ್ಥೆಯನ್ನು ಸರಿಪಡಿಸುವುದು ಪ್ರಥಮ ಆದ್ಯತೆಯಾಗಬೇಕು; ಉಳಿದ ಎಲ್ಲಾ ವಿಷಯಗಳೂ ನಂತರ ಬರುವಂಥವು.

ನಾವೇಕೆ ಇಂತಹ ಶೋಚನೀಯ ಸ್ಥಿತಿಯಲ್ಲಿದ್ದೇವೆ?

1970ರ ಸುಮಾರಿನಿಂದೀಚೆಗೆ ತಮ್ಮ ಮಕ್ಕಳನ್ನು ಶಾಲೆಗೆ ಕಳಿಸುವ ಕುಟುಂಬಗಳ ಸಂಖ್ಯೆ ಒಂದೇ ಸಮನಾಗಿ ಹೆಚ್ಚುತ್ತಿದೆ; 1991ರಿಂದ 2001ರವರೆಗಿನ ದಶಕವು ಶೇಕಡ 12.63ರಷ್ಟು ಅತ್ಯಧಿಕ ಜಿಗಿತವನ್ನು ಕಂಡಿತು. ಹೆಣ್ಣುಮಕ್ಕಳ ಸಾಕ್ಷರತಾ ಪ್ರಮಾಣವನ್ನು ಗಮನಿಸಿದರೆ ಅದು ಇನ್ನೂ ಗಮನ ಸೆಳೆಯುವಂತಿದೆ. ಸಾಕ್ಷರತಾ ಪ್ರಮಾಣದಲ್ಲಿನ ಈ ಹೆಚ್ಚಳಕ್ಕೆ, ಆರು ವರ್ಷಕ್ಕೆ ಮೇಲ್ಪಟ್ಟ ಮಕ್ಕಳನ್ನು ಪ್ರಾಥಮಿಕ ಶಾಲೆಗೆ ದಾಖಲು ಮಾಡಿಕೊಳ್ಳುವಲ್ಲಿನ ಹೆಚ್ಚಳವು ಗಮನಾರ್ಹ ಕೊಡುಗೆಯನ್ನು ನೀಡಿದೆ ಎಂಬ ವಾದದ ಬಗ್ಗೆ ಬಹುಮಟ್ಟಿಗೆ ಸರ್ವಸಮ್ಮತ ಅಭಿಪ್ರಾಯವಿದೆ.

| 2011 82.14 65.46 74.04 9.20 (11.79) ಸಾಕ್ಷರತಾ ಪ್ರಮಾಣ ದಶಕವಾರು ಹೆಚ್ಚಳ | | | | |
|---|---|---|---|---|
| ಭಾರತದ ಜನಗಣತಿ | ಗಂಡಸರು | ಹೆಂಗಸರು | ಒಟ್ಟು | ಶೇಕಡಾವಾರು ಹೆಚ್ಚಳ (ಸ್ತ್ರೀಯರು) |
| 1961 | 40.40 | 15.35 | 28.30 | |
| 1971 | 45.96 | 21.97 | 34.45 | 6.15 (6.62) |
| 1981 | 56.38 | 29.76 | 43.57 | 9.12 (7.79) |
| 1991 | 64.13 | 39.29 | 52.21 | 8.64 (9.53) |
| 2001 | 75.26 | 53.67 | 64.84 | 12.63 (14.38) |
| 2011 | 82.14 | 65.46 | 74.04 | 9.20 (11.79) |

1990ರ ದಶಕದ ಮಧ್ಯಭಾಗದಿಂದ, ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಪ್ರಾಥಮಿಕ ಶಾಲೆಗಳು 1 ಕಿ.ಮೀ ದೂರದ ವ್ಯಾಪ್ತಿಯಲ್ಲಿ ಲಭ್ಯವಿರಬೇಕೆಂದು ಸರ್ಕಾರವು ಗಂಭೀರವಾಗಿ ಪ್ರಯತ್ನಿಸಿದೆ ಎಂಬಲ್ಲಿ ಯಾವ ಸಂಶಯವೂ ಇಲ್ಲ. 1990 ಮತ್ತು 2000ರ ದಶಕಗಳಲ್ಲಿ ಪ್ರಾಥಮಿಕ ಶಾಲೆಗಳಲ್ಲಿ ದಾಖಲಾತಿ ಪ್ರಮಾಣವು ಗಮನಾರ್ಹವಾಗಿ ಹೆಚ್ಚಿದೆ; ಎಲ್ಲ ಮಕ್ಕಳನ್ನೂ ಗಣನೆಗೆ ತೆಗೆದುಕೊಂಡಾಗ, ಸುಮಾರು ಶೇಕಡ 97ರಷ್ಟು ಮಕ್ಕಳು ಪ್ರಾಥಮಿಕ ಶಾಲೆಗಳಿಗೆ ಸೇರುತ್ತಿದ್ದಾರೆ ಎಂದು ಸರ್ಕಾರಿ ಮತ್ತು ಸರ್ಕಾರೇತರ ಸಮೀಕ್ಷೆಗಳು ದೃಢಪಡಿಸಿವೆ. ಹೆಚ್ಚು ಹೆಣ್ಣು ಮಕ್ಕಳು ಶಾಲೆಯಲ್ಲಿದ್ದಾರೆ, ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಅವಕಾಶವಂಚಿತರಾದ ಸಮುದಾಯಗಳ ಇನ್ನಷ್ಟು ಮಕ್ಕಳು ದಾಖಲಾಗಿದ್ದಾರೆ.

ಶಾಲೆಯನ್ನು ಪ್ರವೇಶಿಸುವ ಮೊದಲ ತಲೆಮಾರಿನ ಜನ ಹೆಚ್ಚಾಗಿ ಶಾಲಾ ವ್ಯವಸ್ಥೆಯನ್ನು ಪ್ರವೇಶಿಸಿದಂತೆ, ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿರುವವರ ಮಕ್ಕಳು ಖಾಸಗಿ (ಅನುದಾನಿತ ಮತ್ತು ಅನುದಾನರಹಿತ) ಶಾಲೆಯನ್ನು ಆಯ್ಕೆ ಮಾಡಿಕೊಂಡರು. 1990ರ ದಶಕದ ಮಧ್ಯಭಾಗದ ಹೊತ್ತಿಗೆ ಆಂಗ್ಲ ಮಾಧ್ಯಮದ ಶಾಲೆಗಳಿಗೆ ಬೇಡಿಕೆ ಹೆಚ್ಚಿತು ಮತ್ತು ಹೆಚ್ಚು ಖಾಸಗಿ ಶಾಲೆಗಳು ಗ್ರಾಮೀಣ ಭಾಗದಲ್ಲೂ ಆರಂಭವಾದವು. ತುಲನಾತ್ಮಕವಾಗಿ ಉತ್ತಮ ಸ್ಥಿತಿಯಲ್ಲಿದ್ದವರು ಮತ್ತು ದನಿ ಇರುವವರು ಸರ್ಕಾರಿ ಶಾಲೆಗಳ ವ್ಯವಸ್ಥೆಯಿಂದ ಹೊರನಡೆದಂತೆ, ಸರ್ಕಾರಿ ಶಾಲೆಗಳ ಗುಣಮಟ್ಟವು ಸತತವಾಗಿ ಕುಸಿಯಲಾರಂಭಿಸಿತು.

1990ರ ದಶಕದಲ್ಲಿ ಇನ್ನೊಂದು ಗಮನಾರ್ಹ ಸಮಾನ ವಿದ್ಯಮಾನವು ಸ್ಥಾಪಿತಗೊಂಡಿತು. ದಾಖಲಾತಿ ಹಾಗೂ ಮಕ್ಕಳನ್ನು ಶಾಲೆಗಳಲ್ಲಿ ಉಳಿಸಿಕೊಂಡಿದ್ದರ ಕುರಿತಾದ ದತ್ತಾಂಶಕ್ಕೆ ಆದ್ಯತೆ ನೀಡಲಾಯಿತು ಮತ್ತು ಶಾಲೆಗಳ ಕಾರ್ಯನಿರ್ವಹಣೆಯ ಬಗ್ಗೆ ನಿಗಾವಹಿಸುವ ಪರಿಶ್ರಮದಾಯಕ ಪ್ರಕ್ರಿಯೆ ಹಿಂದಕ್ಕೆ ಸರಿಯಿತು. ಮೇಲ್ವಿಚಾರಣಾ ವ್ಯವಸ್ಥೆಯ ಜಾಗದಲ್ಲಿ ದತ್ತಾಂಶ-ಆಧಾರಿತ ನಿಗಾವಹಿಸುವಿಕೆ ತಲೆಎತ್ತಿತು. ಇದರ ಪರಿಣಾಮವಾಗಿ, ಎಲ್ಲಿಯವರೆಗೂ ಸ್ಥಳೀಯ ಅಧಿಕಾರಿಗಳು ಹೆಚ್ಚಿನ ಪ್ರಮಾಣದ ದಾಖಲಾತಿಯನ್ನು ತೋರಿಸುವುದು ಸಾಧ್ಯವಾಯಿತೋ ಅಲ್ಲಿಯವರೆಗೂ ಕೆಲಸ ಚೆನ್ನಾಗಿ ನಡೆಯುತ್ತಿದೆ ಎಂದೇ ಭಾವಿಸಲಾಯಿತು. ಶಾಲೆ ಬಿಡುವವರ ಪ್ರಮಾಣವು ಗಾಬರಿ ಹುಟ್ಟಿಸುವಷ್ಟಿದ್ದರೂ, ಬಹುತೇಕವಾಗಿ 2000ನೇ ದಶಕದ ಮಧ್ಯಭಾಗದವರೆಗೂ, ಮಕ್ಕಳನ್ನು ಶಾಲೆಯಲ್ಲಿ ಉಳಿಸಿಕೊಳ್ಳಬಲ್ಲ ವ್ಯವಸ್ಥೆಯ ಸಾಮರ್ಥ್ಯವು ಸಾಧನೆಯ ಒಂದು ಪ್ರಮುಖ ಸೂಚಕವೆಂದು ವಾಸ್ತವದಲ್ಲಿ ಗುರುತಿಸಲಾಗಿರಲೇ ಇಲ್ಲ. ಹೀಗಾಗಿ ಅಂದಿನ ಸನ್ನಿವೇಶದಲ್ಲಿ ಶೇಕಡ 95ರಷ್ಟು ಮಕ್ಕಳು ಪ್ರಾಥಮಿಕ ಶಾಲೆಯಲ್ಲಿ ದಾಖಲಾದರೂ, ಶೇಕಡಾ 42 ಭಾಗ ಶಾಲೆಗಳನ್ನು ಬಿಡುತ್ತಿದ್ದರು. ಇನ್ನೂ ಶೋಚನೀಯವಾದ ಸಂಗತಿಯೆಂದರೆ ಶಾಲೆ ಬಿಡುವವರಲ್ಲಿ ಹೆಚ್ಚಿನ ಪ್ರಮಾಣದಲ್ಲಿದ್ದವರು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಮುಸ್ಲಿಂ (ಅವರಲ್ಲಿ ಹೆಣ್ಣುಮಕ್ಕಳು) ಸಮುದಾಯಕ್ಕೆ ಸೇರಿದವರು. ಅವಕಾಶ ವಂಚಿತ ಸಮುದಾಯಕ್ಕೆ ಸೇರಿದ ಬಹುತೇಕ ಮಕ್ಕಳೇ ಸರ್ಕಾರಿ ಶಾಲೆಗಳಿಗೆ ಬರುತ್ತಾರೆ ಎಂಬುದು ಆಕಸ್ಮಿಕವೇನಲ್ಲ ಮತ್ತು ಸರ್ಕಾರವು ಲೆಕ್ಕಾಚಾರ ಹಾಕಿದ ಶಾಲೆ ಬಿಡುವ ಮಕ್ಕಳ ಪ್ರಮಾಣವು ಮುಖ್ಯವಾಗಿ ಸರ್ಕಾರಿ ಶಾಲೆಗಳಿಗೆ ಸಂಬಂಧಿಸಿದೆ.

| ಶಾಲೆ ಬಿಡುವ ಪ್ರಮಾಣ, ತರಗತಿಗಳು 1-8, 2009-10 | | | |
|---|---|---|---|
| | ಎಲ್ಲರೂ | ಹುಡುಗರು | ಹುಡುಗಿಯರು |
| ಎಲ್ಲರೂ | 42.39 | 40.59 | 44.39 |
| ಪರಿಶಿಷ್ಟ ಜಾತಿ | 51.25 | 50.59 | 51.99 |
| ಪರಿಶಿಷ್ಟ ವರ್ಗ | 57.78 | 55.15 | 60.64 |

ಸರ್ಕಾರಿ ಶಾಲೆಗಳ ಕಾರ್ಯವೈಖರಿ ಹಾಗೂ ಗುಣಮಟ್ಟದ ಮೇಲೆ ಅನೇಕ ಸಂಗತಿಗಳ ಒಂದು ಸಂಕೀರ್ಣ ಜಾಲವು ಪ್ರಭಾವ ಬೀರುತ್ತದೆ ಎಂದು ಸಂಶೋಧನೆ ಆಧಾರಿತ ಸಾಕ್ಷ್ಯಗಳು ಹಾಗೂ ಅನುಭವದ ಕಥನಗಳು ಸಾರಿ ಹೇಳುತ್ತವೆ.

ಮೊದಲನೆಯದಾಗಿ, ಶಾಲಾ ವ್ಯವಸ್ಥೆಯು ಯಾರಿಗೂ ಉತ್ತರದಾಯಿ ಅಲ್ಲ. ಸರ್ಕಾರಕ್ಕೆ ತಾನು ನಿಗಾವಹಿಸುವ ಅಂಕಿಸಂಖ್ಯೆಗಳು ತೃಪ್ತಿಕರವಾಗಿದ್ದಲ್ಲಿ (ಅಂದರೆ ಶಾಲೆ ಸೇರಿದ ವಿದ್ಯಾರ್ಥಿಗಳು, ಶಿಕ್ಷಕರ ನೇಮಕಾತಿ, ಪಠ್ಯಪುಸ್ತಕಗಳ ಸರಬರಾಜು, ಮಧ್ಯಾಹ್ನದ ಊಟದ ಸರಬರಾಜುಗಳು, ಕಟ್ಟಡಗಳು, ಶೌಚಾಲಯ ಇತ್ಯಾದಿ), ಬೇರೆ ಯಾವುದನ್ನೇ ಆಗಲಿ ನಿರ್ವಹಿಸುವ ಅಥವಾ ಅದರ ಬಗ್ಗೆ ಗಮನಹರಿಸುವ ಆಸಕ್ತಿ ಇರುವುದಿಲ್ಲ. ಇತ್ತೀಚಿನವರೆಗೂ ಸಮೂಹ ಮತ್ತು ವಿಭಾಗದ ಹಂತದಲ್ಲಿನ ಶೈಕ್ಷಣಿಕ ಬೆಂಬಲದ ಸಂಸ್ಥೆಗಳು ಶಾಲೆಗಳಿಂದ ಮಾಹಿತಿಯನ್ನು ಸಂಗ್ರಹಿಸುವಲ್ಲಿ ತಲ್ಲೀನವಾಗಿದ್ದವು (ಇದು ಇನ್ನೇನು ಬದಲಾಗುತ್ತದೆ ಎಂದು ನಮಗೆ ಮಾಹಿತಿ ನೀಡಲಾಗಿದೆ). ಹಳೆಯ ಕಾಲದ ಇನ್‌ಸ್ಪೆಕ್ಟರ್ಗಳು (ಮೇಲ್ವಿಚಾರಣಾ ಅಧಿಕಾರಿಗಳು) ಶಾಲೆಗಳ ಒಳಗೆ ಏನು ನಡೆಯುತ್ತಿದೆ ಎಂಬುದರ ಬಗ್ಗೆ ಅಥವಾ ಮಕ್ಕಳು ಏನು ಕಲಿಯುತ್ತಿದ್ದಾರಂಬ ಬಗ್ಗೆ ಗಮನಹರಿಸುತ್ತಿಲ್ಲ. ಹಾಗಾಗಿ “ಯಾವುದರ ಮೇಲೆ ಕಣ್ಗಾವಲು ಇರುತ್ತದೋ ಅದನ್ನು ಮಾತ್ರ ನಿರ್ವಹಿಸಲಾಗುತ್ತದೆ” ಎಂಬ ಹಳೆಯ ಸೂಕ್ತಿಯಂತೆ, ನಮ್ಮ ಶಾಲಾ ವ್ಯವಸ್ಥೆಯು ಮಕ್ಕಳನ್ನು ಶಾಲೆಗೆ ದಾಖಲು ಮಾಡಿಕೊಳ್ಳುವುದರಲ್ಲಿ ಹಾಗೂ ಅವರನ್ನು ಹಾಜರಿಪಟ್ಟಿಯಲ್ಲಿ ತೋರಿಸುವುದರಲ್ಲಿ ಪರಿಪೂರ್ಣ ಕೌಶಲ್ಯವನ್ನು ಗಳಿಸಿದೆ.

ಎರಡನೆಯದಾಗಿ, ಅನುತ್ತೀರ್ಣಗೊಳಿಸಬಾರದು ಎಂಬ ನೀತಿಯಿಂದಾಗಿ (ಮಕ್ಕಳು ತರಗತಿಗೆ ನಿಗದಿಯಾದ ಸಾಮರ್ಥ್ಯವನ್ನು ಪಡೆದಿದ್ದಲ್ಲಿ ಅವರನ್ನು ಅದೇ ತರಗತಿಯಲ್ಲಿ ಉಳಿಸಿಕೊಳ್ಳುವುದಿಲ್ಲ), ಅವರು ನಿಜಕ್ಕೂ ತಮ್ಮ ತರಗತಿ-ನಿರ್ದಿಷ್ಟ ಜ್ಞಾನ ಮತ್ತು ಕೌಶಲ್ಯವನ್ನು ಪಡೆದಿದ್ದಾರೋ ಇಲ್ಲವೋ ಎಂಬ ಕಾಳಜಿ ತೋರದೆ ಅವರನ್ನು ಒಂದು ತರಗತಿಯಿಂದ ಮುಂದಿನದಕ್ಕೆ ಶಾಲೆಗಳು ತೇರ್ಗಡೆ ಮಾಡುತ್ತಿವೆ. ಇದರ ಪರಿಣಾಮದಿಂದಾಗಿ ಈಗ ನಾವು, ಅನೇಕ ಮಕ್ಕಳು ಓದಲಿಕ್ಕೆ ಬರೆಯಲಿಕ್ಕೆ ಕಲಿಯದೆಯೇ ಐದನೇ ತರಗತಿಯನ್ನು ತಲುಪುವ ಪರಿಸ್ಥಿತಿಯಲ್ಲಿದ್ದೇವೆ. 2005ರಿಂದ ಪ್ರತಿವರ್ಷ ಸಂಚಾಲಿತಗೊಳ್ಳುತ್ತಿರುವ ಶಿಕ್ಷಣದ ವಾರ್ಷಿಕ ಸ್ಥಿತಿಯ ವರದಿಯು 5ನೇ ತರಗತಿಯ ಶೇಕಡ 50ರಷ್ಟು ಮಕ್ಕಳಿಗೆ ಎರಡನೇ ತರಗತಿಯ ಪಠ್ಯಪುಸ್ತಕವೊಂದನ್ನು ಓದಲು ಬರುವುದಿಲ್ಲ ಎಂದಿರುವುದರಲ್ಲಿ ಅಚ್ಚರಿಯೇನೂ ಇಲ್ಲ! ಈಗ ಇನ್ನೊಂದು ಅಪಾಯ ದೊಡ್ಡದಾಗಿ ಕಾಣಿಸಿಕೊಳ್ಳುತ್ತಿದೆ: ಶಿಕ್ಷಣದ ಹಕ್ಕು, ತಡೆರಹಿತ ತೇರ್ಗಡೆ ನೀತಿಯನ್ನು ಎಂಟನೇ ತರಗತಿಯವರೆಗೂ ವಿಸ್ತರಿಸಿದೆ. ಇದರ ಅರ್ಥವೇನೆಂದರೆ, ಎಂಟು ವರ್ಷಗಳ ಕಾಲ ಶಾಲೆಯಿಲ್ಲಿದ್ದೂ ಸಹ ಭಾಷೆಯನ್ನು ಅಥವಾ ಗಣಿತವನ್ನು ಅಥವಾ ವಿಜ್ಞಾನವನ್ನು ಕಲಿಯದ ಮಕ್ಕಳು ನಮ್ಮಲ್ಲಿರಬಹುದು. ಮೂರನೆಯದಾಗಿ ದೇಶದಾದ್ಯಂತ ಶಾಲೆಗಳು ವಾಸ್ತವವಾಗಿ ಕೆಲಸ ಮಾಡುವ ದಿನಗಳ ಸಂಖ್ಯೆ ವಿಭಿನ್ನವಾಗಿದೆ. 2011ರ ಎಎಸ್‌ಇಆರ್ ಸಮೀಕ್ಷೆಯ ಪ್ರಕಾರ ವಿದ್ಯಾರ್ಥಿಗಳ ಹಾಜರಾತಿಯು ಕುಸಿಯುತ್ತಿದೆ. ಉದಾಹರಣೆಗೆ ಬಿಹಾರದಲ್ಲಿ ವಿದ್ಯಾರ್ಥಿಗಳ

ಸರಾಸರಿ ಹಾಜರಾತಿಯು 2007ರಲ್ಲಿ ಶೇಕಡ 59 ಇದ್ದದ್ದು 2011ರಲ್ಲಿ ಶೇಕಡಾ 50ಕ್ಕೆ ಕುಸಿದಿದೆ. ಅದೇ ಅವಧಿಯಲ್ಲಿ ಉತ್ತರಪ್ರದೇಶದಲ್ಲಿ ಅದು ಶೇಕಡಾ 67ರಿಂದ 57ಕ್ಕೆ ಕುಸಿದಿದೆ. ಶಿಕ್ಷಕರ ಗೈರುಹಾಜರಿ ಪ್ರಮಾಣ ಹೆಚ್ಚಿದೆ ಎಂಬುದನ್ನು ಅನೇಕ ಅಧ್ಯಯನಗಳು ತೋರಿಸಿವೆ. ಗ್ರಾಮೀಣ ಪ್ರದೇಶದ ಅಧ್ಯಾಪಕರು ತಾರೀಖನ್ನು ನಮೂದಿಸದೆ ರಜಾ ಅರ್ಜಿಯನ್ನು ಬರೆದಿಟ್ಟು ಸರತಿಯ ಮೇಲೆ ಶಾಲೆಗೆ ಬರುತ್ತಾರೆ ಎಂಬುದನ್ನು ನಾವು ನಮ್ಮ ಕ್ಷೇತ್ರ ಅಧ್ಯಯನದಲ್ಲಿ ಕಂಡುಕೊಂಡಿದ್ದೇವೆ. ಹೀಗಾಗಿ ಪ್ರಾಥಮಿಕ ಶಾಲೆಯೊಂದರಲ್ಲಿ ಐವರು ಶಿಕ್ಷಕರಿದ್ದರೆ, ಯಾವುದೇ ದಿನದಂದು ಅಲ್ಲಿ ಕೇವಲ ಮೂವರು ಅಥವಾ ಇಬ್ಬರು ಹಾಜರಿರುತ್ತಾರೆ. ಹೀಗೆ ಅವರು ಒಬ್ಬರಾದ ಮೇಲೆ ಇನ್ನೊಬ್ಬರು ಶಾಲೆಗೆ ಚಕ್ಕರ್ ಹೊಡೆಯುವುದನ್ನು ಆವರ್ತಿಸುತ್ತಿದ್ದು ತತ್ಪರಿಣಾಮವಾಗಿ ಒಬ್ಬ ಶಿಕ್ಷಕರು ಒಂದಕ್ಕಿಂತ ಹೆಚ್ಚು ತರಗತಿಗಳನ್ನು ನಿಭಾಯಿಸಬೇಕಾದ ಪರಿಸ್ಥಿತಿ ಇರುತ್ತದೆ. ಯಾವುದೇ ಒಂದು ವರ್ಗ/ತರಗತಿಯಲ್ಲಿ ಪ್ರತಿದಿನ ಬೋಧನೆ/ಕಲಿಕೆಗೆ ವಾಸ್ತವವಾಗಿ ಕೇವಲ 25 ನಿಮಿಷಗಳಷ್ಟು ಅಲ್ಪ ಸಮಯವನ್ನು ವ್ಯಯಿಸಲಾಗುತ್ತದೆ ಎಂಬುದನ್ನು ನಾನು ಕಳೆದ ಹತ್ತು ವರ್ಷಗಳಲ್ಲಿ ಕಂಡುಕೊಂಡಿದ್ದೇನೆ. ಸರ್ಕಾರದ ಸರ್ವ ಶಿಕ್ಷಣ ಅಭಿಯಾನದಿಂದ ನಿಯೋಜಿಸಲ್ಪಟ್ಟ ಒಂದು ಅಧ್ಯಯನವು ಸಹ ನಿಜವಾದ ಕಲಿಕೆಯ ಅವಧಿಯು (ಪಾಠದ ಅವಧಿ) ವಿಪರೀತ ಕಡಿಮೆ ಇದ್ದು, ವಿದ್ಯಾರ್ಥಿಗಳ ಹಾಜರಾತಿ ಸಹ ಕಳವಳಕಾರಿಯಾಗಿದೆ ಎಂಬುದನ್ನು ಗಮನಿಸಿದೆ. ಹೀಗಿರುವಾಗ ನಮ್ಮ ಮಕ್ಕಳು ಕಲಿಯುತ್ತಿಲ್ಲ ಎಂಬ ಬಗ್ಗೆ ನಮಗೆ ಅಚ್ಚರಿ ಏಕೆ?

ನಾಲ್ಕನೆಯದಾಗಿ ಶಿಕ್ಷಣದ ಹಕ್ಕು, ಗುಣಮಟ್ಟವನ್ನು ಖಚಿತಪಡಿಸಲು ಮೂಲಸೌಕರ್ಯ ಮತ್ತು ಸೌಲಭ್ಯಗಳಿಗೆ ಸಂಬಂಧಿಸಿದಂತೆ, ವಿದ್ಯಾರ್ಥಿ-ಶಿಕ್ಷಕ ಅನುಪಾತಕ್ಕೆ ಮತ್ತು ಇತರ ಶೈಕ್ಷಣಿಕ ವಿಷಯಗಳಿಗೆ ರೂಢಿಯ ಮಟ್ಟಗಳನ್ನು ನಿಗದಿಪಡಿಸಿದೆ. ಇಂದಿನ ಸರ್ವ ಶಿಕ್ಷಣ ಅಭಿಯಾನ, 1990ರ ದಶಕದ ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ, 1980ರ ದಶಕದ ಕಪ್ಪು ಹಲಗೆ ಕಾರ್ಯಕ್ರಮ ಮುಂತಾದುವು ವಿಸ್ತೃತ ಮಾರ್ಗದರ್ಶಿ ಸೂತ್ರಗಳನ್ನು ಅಭಿವೃದ್ಧಿಪಡಿಸಿದವು ಮತ್ತು ರೂಢಿಯ ಮಟ್ಟಗಳನ್ನು ಪ್ರಕಟಪಡಿಸಿದವು. ಆದರೆ ದುಃಖಕರ ವಾಸ್ತವಿಕತೆಯೇನೆಂದರೆ ಇಂತಹ ಅನೇಕ ಆಶ್ಚರ್ಯಕರ ಯೋಜನೆಗಳು ಕಾಗದದ ಮೇಲಷ್ಟೇ ಉಳಿಯುತ್ತವೆ. ಅನೇಕ ಬಾರಿ ನೀತಿಯ ಮೂಲಕ ಪ್ರಕಟಿಸಲ್ಪಟ್ಟ ಉನ್ನತ ಉದ್ದೇಶಗಳು ವಾಸ್ತವಿಕ ಕ್ರಿಯೆಯೊಂದಿಗೆ ಮುನ್ನಡೆಯುವುದಿಲ್ಲ. ಸರ್ಕಾರಿ-ಪ್ರಾಯೋಜಿತ, ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿದ ಕೇಂದ್ರ ವಲಯದ ಯೋಜನೆಗಳು ಜಾರಿಯಾದ ಮೂರು ವರ್ಷಗಳ ನಂತರವೂ ಸಹ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಸ್ಥಾಪಿತಗೊಂಡಿರುವ ನಮ್ಮ ಸರ್ಕಾರಿ ಶಾಲೆಗಳು(ಎಂಸಿಡಿ ನಿರ್ವಹಿಸುತ್ತಿರುವ ಶಾಲೆಗಳ ಅತ್ಯಂತ ದಯನೀಯ ಸ್ಥಿತಿ ಇದಕ್ಕೆ ಒಂದು ನಿದರ್ಶನ) ಮುರಿದು ಬೀಳುತ್ತಿರುವ ಮೂಲಸೌಕರ್ಯಗಳನ್ನು ಮತ್ತು ತೀರಾ ಕೆಟ್ಟದಾಗಿ ನಿರ್ವಹಿಸಲ್ಪಡುತ್ತಿರುವ ಸೌಲಭ್ಯಗಳನ್ನು ಹೊಂದಿವೆ. ಶೌಚಾಲಯಗಳಿರುವೆಡೆಗಳಲ್ಲಿ ನೀರಿರುವುದಿಲ್ಲ, ಶೌಚಾಲಯ, ನೀರು ಎರಡೂ ಇದ್ದರೆ ಶುಚಿತ್ವ ಒಂದು ಸಮಸ್ಯೆ. ಮೂಲ ನಿರ್ವಹಣೆಯ ಸಮಸ್ಯೆಗಳಲ್ಲದೆ ನಿರ್ಮಾಣದ ಗುಣಮಟ್ಟವೂ ಕಳಪೆಯಾಗಿರುತ್ತದೆ. ತತ್ಫಲವಾಗಿ ನಮ್ಮ ಶಾಲೆಗಳು ಆಕರ್ಷಕವಾಗಿಯೂ ಇಲ್ಲ, ಸುರಕ್ಷಿತವಾಗಿಯೂ ಇಲ್ಲ.

ಸಮಸ್ಯೆಯು ಆರ್ಥಿಕ ಸಂಪನ್ಮೂಲಗಳ ಕುರಿತದ್ದಲ್ಲ ಅಥವಾ ಉತ್ತಮ ನೀತಿಯಾಗಲೀ, ಕಾರ್ಯತಂತ್ರವಾಗಲೀ ಲಭ್ಯವಿಲ್ಲ ಎಂಬುದೂ ಅಲ್ಲ. ಮೂಲಭೂತ ಸಂಗತಿಯೆಂದರೆ ಸರ್ಕಾರಿ ಶಾಲೆಗಳು ಕೆಲಸ ಮಾಡುತ್ತವೋ ಇಲ್ಲವೋ ಎಂಬುದರ ಬಗ್ಗೆ ಯಾರಿಗೂ ನಿಜವಾದ ಕಾಳಜಿ ಇಲ್ಲ. ನಮ್ಮ ರಾಜಕೀಯ ನಾಯಕರು, ಆಡಳಿತಗಾರರು, ಮಾಧ್ಯಮ ಮತ್ತು ಮಧ್ಯಮ ವರ್ಗಗಳೆಲ್ಲವೂ ತಮ್ಮ ಮಕ್ಕಳ ನಿಟ್ಟಿನಲ್ಲಿ, ಸರ್ಕಾರಿ ಶಾಲೆಗಳನ್ನು ತೊರೆದಿವೆ. ಇತ್ತೀಚಿನ

ಅಧ್ಯಯನವೊಂದಕ್ಕಾಗಿ ನಾನು ಭಾರತದ ಎಂಟು ರಾಜ್ಯಗಳಾದ್ಯಂತ ಸುಮಾರು ಎಂಟುನೂರು ಶಿಕ್ಷಕರೊಂದಿಗೆ ವಿಚಾರ ವಿನಿಯಮ ಮಾಡಿಕೊಳ್ಳುವ ಸಂದರ್ಭ ಒದಗಿತ್ತು. ಅವರಲ್ಲಿ ಒಬ್ಬರೂ ಸಹ ತಮ್ಮ ಮಕ್ಕಳನ್ನು, ಮೊಮ್ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸಿರಲಿಲ್ಲ ಎಂಬುದನ್ನು ಕೇಳಿ ನನಗೆ ಆಘಾತವಾಯಿತು. ಇಂಗ್ಲಿಷ್ ಬೋಧಿಸುವ ಮತ್ತು 'ಶಿಸ್ತನ್ನು ಉಳಿಸಿಕೊಂಡುಬರುವ' ಕಾರ್ಯಶೀಲ ಶಾಲೆಗೆ ತಮ್ಮ ಮಕ್ಕಳನ್ನು ಕಳಿಸಬೇಕೆಂಬುದು ತಮ್ಮ ಇಚ್ಛೆಯಾಗಿತ್ತೆಂದು ಅವರೆಲ್ಲರೂ ಹೇಳಿದರು. ತಮ್ಮ ಸ್ವಂತ ಕುಟುಂಬದ ಮಟ್ಟಿಗೆ ಅವರೆಲ್ಲರಿಗೂ ಇಂಗ್ಲಿಷ್ ಮಾಧ್ಯಮ ಬೇಕು, ಆದರೆ ಅದೇ ಸಮಯದಲ್ಲಿ ಅವರೆಲ್ಲರೂ ಸರ್ಕಾರಿ ಶಾಲೆಗಳಲ್ಲಿ (ಸ್ವ)ದೇಶೀಯ ಭಾಷೆಗಳಿಗಾಗಿ ವಾದಿಸುತ್ತಾರೆ ಹಾಗೂ ಒತ್ತಾಯಪಡಿಸುತ್ತಾರೆ. ಅವರಿಗೆ ತಮ್ಮ ಮಕ್ಕಳು ಸೂಕ್ತವಾದ ತರಗತಿ ಕೊಠಡಿಗಳು ಮತ್ತು ಮೇಜುಗಳು, ತರಬೇತಿ ಹೊಂದಿದ ಶಿಕ್ಷಕರೊಂದಿಗೆ ಕೆಲಸ ಮಾಡುವಂಥ ಶಾಲೆಗಳಿಗೆ ಹೋಗುವುದನ್ನು ನೋಡಲು ಬಯಸುತ್ತಾರೆ. ಆದರೆ ಅದೇ ಸಮಯದಲ್ಲಿ ಸರ್ಕಾರಿ ಶಾಲೆಗಳ ಮಕ್ಕಳನ್ನು ಕಿಟಕಿಗಳೂ ಇಲ್ಲದ ಚಿಕ್ಕ ಸ್ಥಳಗಳ ಇಕ್ಕಟ್ಟಿನಲ್ಲಿರಿಸಿದಾಗ, ಅವರನ್ನು ನೆಲದ ಮೇಲೆ ಕೂಡಿಸಿದಾಗ, ದೀಪವಾಗಲೀ, ಪಂಖಗಳಾಗಲೀ ಇಲ್ಲದಿದ್ದಾಗ ಮತ್ತು ಎಲ್ಲಕ್ಕಿಂತ ಕೆಟ್ಟ ಸಂಗತಿಯೆಂದರೆ ಅವರು ಪ್ರತಿದಿನ ಅದೇ ಶಿಕ್ಷಕರನ್ನು ನೋಡುವುದು ಖಾತ್ರಿ ಇಲ್ಲದಿದ್ದಾಗ, ಅದನ್ನು ಬೇರೆಯ ರೀತಿಯಲ್ಲಿ ನೋಡುತ್ತಾರೆ.

ಹೀಗಾಗಿ ಶಿಕ್ಷಣದ ಹಕ್ಕು ಎಂದರೆ ಅದು ಕೇವಲ ಖಾಸಗಿ ಶಾಲೆಗಳಲ್ಲಿ ಒಂದಿಷ್ಟು ಸೀಟುಗಳನ್ನು ಮೀಸಲಾಗಿರಿಸುವುದಲ್ಲ, ಅದು ನಮ್ಮ ಎಲ್ಲ ಶಾಲೆಗಳೂ ಸರಿಯಾಗಿ ಕೆಲಸ ಮಾಡುವ ಮತ್ತು ನಮ್ಮ ಎಲ್ಲ ಮಕ್ಕಳಿಗೂ ಅವರು ಎಳೆಯರಾಗಿರುವಾಗ ಒಂದೇ ಮಟ್ಟದ ಅವಕಾಶವು ದೊರೆಯುವುದನ್ನು ಖಾತ್ರಿಪಡಿಸುವ ಬಗ್ಗೆ ಇರುವಂತಹದು. ಆದರೂ ಮುಖ್ಯ ಪ್ರಶ್ನೆಯೆಂದರೆ ಅಶಿಕ್ಷಿತ ತಾಯಿ, ತಂದೆಯರ ಮಕ್ಕಳಿಗೆ, ಶಿಕ್ಷಿತ ತಾಯಿತಂದೆಯರನ್ನು ಹೊಂದಿರುವ ಮಕ್ಕಳೊಂದಿಗೆ ಒಂದೇ ಮಟ್ಟದ ಅವಕಾಶವನ್ನು ಪಡೆಯುವುದು ಸಾಧ್ಯವೇ?

ಶಿಕ್ಷಣ ಹಕ್ಕಿನ ಇನ್ನೊಂದು ಮುಖ

ಮಗುವೊಂದರ ಕುಟುಂಬದ ಸಾಮಾಜಿಕ ಮತ್ತು ಆರ್ಥಿಕ ಸ್ಥಾನಮಾನವು ಮಗುವಿನ ಶೈಕ್ಷಣಿಕ ಸಾಧನೆಯನ್ನು ನಿಶ್ಚಯಿಸುವ ಅತ್ಯಂತ ಪ್ರಬಲ ನಿರ್ಣಾಯಕಗಳಲ್ಲಿ ಒಂದೆಂಬುದು ನಮಗೆ ದಶಕಗಳಿಂದಲೂ ತಿಳಿದಿರುವ ಸಂಗತಿ; ಸುಮಾರು ಅರವತ್ತು ವರ್ಷಗಳ ಶೈಕ್ಷಣಿಕ ಮಾಹಿತಿ ಮತ್ತು ಇತರ ಸಮಾಜೋ-ಆರ್ಥಿಕ ಸಮೀಕ್ಷೆಗಳು (ಎನ್‌ಎಸ್‌ಎಸ್, ಎನ್‌ಎಫ್‌ಎಚ್‌ಎಸ್‌ನಂತಹವು) ಇದನ್ನು ನಿದರ್ಶಿಸಿವೆ. ಮಗುವು ಶಿಶುವಿಹಾರ ಹಂತದಿಂದ ಪ್ರೌಢಶಾಲೆಗೆ ಹೋದಂತೆ ಸಾಧನೆಯಲ್ಲಿನ ಕಂದರದ ಹೆಚ್ಚಳವು ಮುಂದುವರೆದು, ಕಡೆಗೆ ಕಲಿಕೆಯ ಅಭಾವದ ಸಂಚಿತ ಹೊರೆಯು ಮಗುವನ್ನು ಶಿಕ್ಷಣದಿಂದ ಹೊರದಬ್ಬುತ್ತದೆ. ಒಂದು ಕುಟುಂಬದ ಸಮಾಜೋ- ಆರ್ಥಿಕ ಲಕ್ಷಣಗಳು ಮಕ್ಕಳ ಶೈಕ್ಷಣಿಕ ಸಾಧನೆಯನ್ನು ನಿರ್ಧರಿಸುತ್ತವೆ ಎಂಬುದು ಸಾಕಷ್ಟು ಸುಪರಿಚಿತವೆನಿಸಿದೆ. ಇದಕ್ಕೆ ಕಾರಣ, ಅವರು ಬೇರೆ ಬೇರೆ ರೀತಿಯ ಶಾಲೆಗಳಿಗೆ ಹೋಗುತ್ತಾರೆ ಎಂಬುದಷ್ಟೇ ಅಲ್ಲದೆ, ನಾವು ಆರ್ಥಿಕ ಶ್ರೇಣಿಯಲ್ಲಿ ಮೇಲಕ್ಕೇರುತ್ತಿದ್ದಂತೆ ಮಕ್ಕಳಿಗೆ ಲಭ್ಯವಾಗಬಲ್ಲ ಸಾಮಾಜಿಕ ಸಂಪತ್ತು ಸಹ ಹೆಚ್ಚುತ್ತಿರುತ್ತದೆ. ಭಾರತದಲ್ಲಿ ಕೌಟುಂಬಿಕ ಬಡತನ, ವಾಸಮಾಡುವ ಸ್ಥಳ (ಹಳ್ಳಿ, ಬುಡಕಟ್ಟಿನ ವಾಸಸ್ಥಾನ, ನಗರದ ಕೊಳೆಗೇರಿ ಮುಂತಾದುವು), ಜಾತಿಯ/ಸಮುದಾಯದ ಅಸ್ಮಿತೆ, ಲಿಂಗ ಹಾಗೂ ತಾಯಿ ತಂದೆಯರ ಉದ್ಯೋಗ - ಈ ಎಲ್ಲ ಅಂಶಗಳೂ ಸೇರಿ ಶೈಕ್ಷಣಿಕ ಸಾಧನೆಯ ಪ್ರಮುಖ ಮುನ್ಸೂಚಕವಾಗುತ್ತವೆ. ನ್ಯಾಯ ಮತ್ತು ಸಮಾನತೆಯ ಕುರಿತಾದ ಸಂಘರ್ಷವು ಅಂತಿಮವಾಗಿ, ಗುಣಮಟ್ಟದ ಶಿಕ್ಷಣಕ್ಕಾಗಿ ನಡೆಯುವ

ಹೋರಾಟವೇ ಆಗಿರುತ್ತದೆ ಎಂಬುದು ನಮಗೆಲ್ಲಾ ಅಂತರಾಳದಲ್ಲಿ ಗೊತ್ತಿರುತ್ತದೆ ಮತ್ತು ನಾವು ಯಾರಾಗಿದ್ದೇವೆ ಎಂಬುದು ಪದೇಪದೇ ನಮಗೆ ಎಂತಹ ಹಾಗೂ ಯಾವ ಗುಣಮಟ್ಟದ ಶಿಕ್ಷಣ ಸಿಗಲಿದೆ ಎಂಬುದನ್ನು ನಿರ್ಧರಿಸುತ್ತದೆ.

ಅದೇನೇ ಇರಲಿ, ಎರಡು ಅಂಶಗಳ ನಡುವಿನ ಕೊಂಡಿ ಕಳಚಿಕೊಂಡದ್ದಾದರೂ ಏಕೆ ಮತ್ತು ಹೇಗೆ? ಶಿಕ್ಷಣ ತಜ್ಞರು ಮತ್ತು ಆಡಳಿತಗಾರರು ಒಂದಾದಮೇಲೊಂದು ಧೋರಣೆಯನ್ನು ಅಳವಡಿಸಿಕೊಂಡ ನೀತಿಗಳು ಮತ್ತು ಆಚರಣೆಗಳತ್ತ ಮತ್ತೊಮ್ಮೆ ಗಂಭೀರವಾಗಿ ಗಮನಹರಿಸಬೇಕು. 1990ರ ದಶಕದಲ್ಲಿ ಸರ್ಕಾರವು ಸುಲಭಗಮ್ಯತೆ(access) ಮತ್ತು ದಾಖಲಾತಿಯ ಬಗ್ಗೆ ಹೆಚ್ಚಿನ ಗಮನವನ್ನು ಕೇಂದ್ರೀಕರಿಸಿ, ಗುಣಮಟ್ಟದ ಬಗ್ಗೆ ನಂತರದಲ್ಲಿ ಚಿಂತಿಸಿದರಾದೀತೆಂದು ತೀರ್ಮಾನಿಸಿತು. ಈ ಬೇರ್ಪಡಿಸುವಿಕೆಗೆ ನಾವು ಭಾರಿ ಬೆಲೆ ತೆರಬೇಕಾಯಿತು ಮತ್ತು ನಾವು ಇಂದು ಯಾವ ಪರಿಸ್ಥಿತಿಯಲ್ಲಿದ್ದೇವೆಂದರೆ ಬಡತನದಲ್ಲಿರುವ ಮತ್ತು ಹಿಂದುಳಿದಿರುವ ಸಾಮಾಜಿಕ ಗುಂಪುಗಳ ಮಕ್ಕಳು, ಸಾಮಾಜಿಕ-ಆರ್ಥಿಕ ಸ್ಥಾನಮಾನ ಮತ್ತು ಕೆಳಮಟ್ಟದ ಶಿಕ್ಷಣದ ದುಪ್ಪಟ್ಟು ಹೊರೆಯನ್ನು ಹೊರಬೇಕಿದೆ.

ಉನ್ನತ ಶಿಕ್ಷಣವನ್ನು ಪಡೆದ ತಾಯಿ, ತಂದೆಯರು ತಮ್ಮ ಮಕ್ಕಳ ಜ್ಞಾನಗ್ರಹಣದ ಅಭಿವೃದ್ಧಿಗೆ ಹೆಚ್ಚಿನ ಸಮಯವನ್ನು ತೊಡಗಿಸುತ್ತಾರೆ ಎಂಬುದಕ್ಕೆ ಸಾಕಷ್ಟು ಸಾಕ್ಷಿ ದೊರಕುತ್ತದೆ. ಮಾಧ್ಯಮಿಕ ಶಾಲೆಯವರೆಗೆ ವಿದ್ಯಾಭ್ಯಾಸವಿರುವ ತಾಯಂದಿರು ತಮ್ಮ ಮಕ್ಕಳ ಶಿಕ್ಷಣಕ್ಕೆ ಮಾರ್ಗದರ್ಶನ ನೀಡಲು ಹೆಚ್ಚು ಸಮರ್ಥರಿರುತ್ತಾರೆ ಮತ್ತು ಅವರ ಸರ್ವತೋಮುಖ ಅಭಿವೃದ್ಧಿಗಾಗಿ ಸಮಯವನ್ನೂ, ಶಕ್ತಿಯನ್ನೂ ವಿನಿಯೋಗಿಸುತ್ತಾರೆ. ಅವರಿಗೆ ಸಮಯವಿಲ್ಲದಿದ್ದರೂ, ಪಾಠ ಹೇಳಿಸಲು ಶಿಕ್ಷಕರನ್ನು ನೇಮಿಸುತ್ತಾರೆ ಅಥವಾ ಮನೆಪಾಠದ ಕ್ಲಾಸುಗಳಿಗೆ ಮಕ್ಕಳನ್ನು ಸೇರಿಸುತ್ತಾರೆ. ಇನ್ನೊಂದು ಕಡೆ ಶಿಕ್ಷಿತ ವಯಸ್ಕರು ಅತ್ಯಂತ ಕಡಿಮೆಯಿರುವ ಬಡ ಕುಟುಂಬದ ಮಗುವಿಗೆ ಇದೇ ರೀತಿಯ ಆರಂಭಾನುಕೂಲ ಸಿಗುವುದಿಲ್ಲ. ಹೀಗಾಗಿ ಸಾಮಾಜಿಕವಾಗಿ ಅವಕಾಶವಂಚಿತರಾದ ಸಮುದಾಯದ ಮಕ್ಕಳಿಗೆ ಶಾಲಾ ನಂತರದ ಬೆಂಬಲವನ್ನು, ಪ್ರಚೋದನೆಯನ್ನು ನೀಡುವ ಮೂಲಕ ಉತ್ತಮ ಸೌಕರ್ಯಗಳುಳ್ಳ ಶಾಲೆಗಳನ್ನು ಒದಗಿಸಬೇಕು ಎಂಬುದು ತರ್ಕಸಮ್ಮತವಲ್ಲವೇ? ಸರ್ಕಾರಿ ಶಾಲೆಯ ಮಕ್ಕಳಿಗಾಗಿ, ಗ್ರಂಥಾಲಯ ಹಾಗೂ ಕ್ರೀಡೆಗಳಿಗೆಂದು ನಾವು ಹೆಚ್ಚು ಹಣ ತೊಡಗಿಸಬೇಕಲ್ಲವೇ? ಅದೇ ರೀತಿಯಲ್ಲಿ ಅವರಿಗೆ ನಿಯತವಾದ ಆರೋಗ್ಯ ತಪಾಸಣೆ ಹಾಗೂ ಸೂಕ್ತ ಪೌಷ್ಟಿಕ ಆಹಾರವನ್ನು ಒದಗಿಸುವುದನ್ನು ಖಾತ್ರಿಪಡಿಸಬೇಕಲ್ಲವೇ? ಸಮಾನ ಮಟ್ಟದ ಅವಕಾಶವನ್ನು ಒದಗಿಸಲು ನಾವು ಇನ್ನೂ ಬಹಳಷ್ಟನ್ನು ಮಾಡಬೇಕಾಗುತ್ತದೆ ಎಂಬುದನ್ನು ತೋರಿಸುವ ಅಗಾಧ ಸಾಕ್ಷ್ಯವಿದ್ದರೂ, ನಾವೇಕೆ ಬಡಬಗ್ಗರಿಗಾಗಿ ಅಷ್ಟು ಕಡಿಮೆ ಹಣವನ್ನು ವೆಚ್ಚ ಮಾಡುತ್ತಿದ್ದೇವೆ?

ಪ್ರಮಾಣ ಮೀರುವಷ್ಟು ದೊಡ್ಡ ಸಂಖ್ಯೆಯ ಬಡತನದಲ್ಲಿ ಜೀವಿಸುತ್ತಿರುವ ಜನರು, ಪರಿಶಿಷ್ಟ ಜಾತಿ, ಪಂಗಡಗಳಿಗೆ ಸೇರಿದವರು, ವಸತಿಹೀನರು, ಹೊಸ ವಲಸಿಗರು, ಮುಂತಾದವರು ಅತ್ಯಂತ ಕೆಳಮಟ್ಟದ (ಸರ್ಕಾರದ ಮಾನದಂಡಕ್ಕೆ ಅನುಸಾರವಾಗಿ) ಶಾಲೆಗಳನ್ನು ಸೇರುತ್ತಾರೆ. ಅವು ಏಕೋಪಾಧ್ಯಯ ಶಾಲೆಗಳಾಗಿರುವ ಅಥವಾ ಜೀರ್ಣಾವಸ್ಥೆಯಲ್ಲಿರುವ ಕಟ್ಟಡಗಳಲ್ಲಿರುವ ಸಾಧ್ಯತೆಗಳಿವೆ. ಅವರು ಅನೇಕ ತರಗತಿಗಳುಳ್ಳ ಕೊಠಡಿಯಲ್ಲಿ ಕಲಿಯುವ ಸಾಧ್ಯತೆಯಿದ್ದು, ಅಲ್ಲಿನ ಶಿಕ್ಷಕರಿಗೆ ಬಹುಶಃ ಸರಿಯಾದ ತರಬೇತಿಯಾಗಲೀ ಅರ್ಹತೆಯಾಗಲೀ ಇರುವುದಿಲ್ಲ. ಆದಾಯದಲ್ಲಿನ ಅಸಮಾನತೆ ಹೇಗಿರುತ್ತದೆ ಎಂದರೆ ಹೆಚ್ಚಿನ ಆದಾಯವಿರುವ ಕುಟುಂಬಗಳು ಮಧ್ಯಮ ಅಥವಾ ಕಡಿಮೆ ಆದಾಯದ ಕುಟುಂಬಗಳಿರುವ ಪ್ರದೇಶಗಳಿಂದ ಪ್ರತ್ಯೇಕಗೊಂಡ ಆವೃತ ಜಾಗಗಳಲ್ಲಿ ವಾಸಿಸುತ್ತಿರುತ್ತವೆ. ಕಡುಬಡವರನ್ನು ಬಹಳಷ್ಟು ಸಲ ನಗರದ ಹೊರವಲಯಗಳಿಗೆ ಅಥವಾ ಗ್ರಾಮೀಣ ಪ್ರದೇಶಗಳಲ್ಲಿನ ಪ್ರತ್ಯೇಕವಾದ ವಸತಿ ಪ್ರದೇಶ/ಕೊಪ್ಪಲುಗಳಿಗೆ ಅಥವಾ ತಾಂಡಾಗಳಿಗೆ ವರ್ಗಾಯಿಸಲಾಗುತ್ತದೆ. ನಗರ ಪ್ರದೇಶಗಳಲ್ಲಿ ಹೊಸ

ಕೊಳೆಗೇರಿಗಳು ಮತ್ತು ಪುನರ್ವಸತಿ ಕಾಲನಿಗಳು ಮೂಲಭೂತ ನಾಗರಿಕ ಸೌಲಭ್ಯಗಳನ್ನು ಹೊಂದಿರುವುದಿಲ್ಲ ಮತ್ತು ಬಹುತೇಕ ಜಾಗಗಳಲ್ಲಿ ಶಾಲೆಯಿರುವುದಿಲ್ಲ. ಈ ಸ್ಥಾನಿಕ ಪ್ರತ್ಯೇಕತೆಯು ಅವರು ವಿಭಿನ್ನ ರೀತಿಯ, ಭೇದಕಾರಕ ಸೌಲಭ್ಯಗಳುಳ್ಳ ಶಾಲೆಗಳಿಗೆ ಹೋಗುತ್ತಾರೆಂಬುದನ್ನು ಸೂಚಿಸುತ್ತದೆ. ಹೀಗಾಗಿ ಖಾಸಗಿ ಶಾಲೆಗಳಲ್ಲಿನ ನೆರೆಹೊರೆಯವರ ಮೀಸಲಾತಿಯು ಅಂತಹ ಮಕ್ಕಳಿಗೆ ನಿಜವಾಗಿ ಅನುಕೂಲಕರವಾಗಲಾರದು.

ಕಟುವಾದ ವಾಸ್ತವವೇನೆಂದರೆ, ಎಲ್ಲ ಮಕ್ಕಳಿಗೂ ಸಮಾನ ಮಟ್ಟದ ಅವಕಾಶವನ್ನು ಖಾತ್ರಿಪಡಿಸುವಂತಹ ಮಾರ್ಗನಕ್ಷೆಯೊಂದು ಶಿಕ್ಷಣದ ಹಕ್ಕಿನಲ್ಲಿಲ್ಲ. ಆದ್ದರಿಂದಲೇ ಬಹುಶಃ ಇದನ್ನು ಸ್ವಲ್ಪಮಟ್ಟಿನ ಸಿನಿಕತನದಿಂದ ಸ್ವೀಕರಿಸಲಾಗಿದೆ. ಇತರ ಅನೇಕ ಸದುದ್ದೇಶದ ಕಾನೂನುಗಳಂತೆಯೇ ಶಿಕ್ಷಣದ ಹಕ್ಕು, ವಿಷಯದ ಕೇಂದ್ರವನ್ನು ಸೋಕುವುದಿಲ್ಲ. ನಮ್ಮ ಮಕ್ಕಳಿಗೆ ಅದರಲ್ಲೂ ವಿಪರೀತವಾಗಿ ಸೌಲಭ್ಯ ಹಾಗೂ ಅವಕಾಶಗಳಿಂದ ವಂಚಿತರಾದವರಿಗೆ ಖಾಸಗಿ ಶಾಲೆಗಳಲ್ಲಿನ ಸಾಂಕೇತಿಕ ಮೀಸಲಾತಿಗಿಂತ ಸಾಕಷ್ಟು ಹೆಚ್ಚಿನದು ಅಗತ್ಯವಾಗಿದೆ.

ನಾವೇನು ಮಾಡಬಹುದು?

ದೇಶದಲ್ಲಿರುವ ಪ್ರತಿಯೊಂದು ಶಾಲೆಯೂ ಒಂದು ಕನಿಷ್ಠ ಮೂಲಭೂತ ಅಂಗೀಕಾರ್ಹ ಮಟ್ಟಕ್ಕೆ, ಅಂದರೆ ಕೇಂದ್ರಿಯ ವಿದ್ಯಾಲಯ ಅಥವಾ ನವೋದಯ ವಿದ್ಯಾಲಯಗಳ ಮಟ್ಟಕ್ಕೆ ಏರುವುದನ್ನು ಖಾತ್ರಿಪಡಿಸಬಲ್ಲ ಅಗ್ರಕ್ರಿಯಾಶೀಲ ಸರ್ಕಾರವೊಂದು ನಮ್ಮ ಅಗತ್ಯ. ಒಂದು ತರಗತಿಗೆ ಒಬ್ಬ ಅಧ್ಯಾಪಕರು ಎಂಬುದನ್ನು ಬದಲಿಸತಕ್ಕದ್ದಲ್ಲ; ಪ್ರತಿಯೊಂದು ಶಾಲೆಗೂ (ಪ್ರತಿ ಜಿಲ್ಲೆಗೆ ಅಲ್ಲ) ವಿದ್ಯಾರ್ಥಿ-ಶಿಕ್ಷಕ ಅನುಪಾತವನ್ನು ಲೆಕ್ಕ ಹಾಕಬೇಕು; ಮತ್ತು ಶಾಲೆಗಳ ಕಾರ್ಯವೈಖರಿಯ ಬಗ್ಗೆ ತಪಾಸಣೆ ನಡೆಸಲು ಒಂದು ಸದೃಢ ಸ್ವತಂತ್ರ ವ್ಯವಸ್ಥೆ ಇರಬೇಕು (ಜನರಿಗೆ ದೂರುಗಳನ್ನು ಸಲ್ಲಿಸಲು ಶುಲ್ಕ ರಹಿತ ಸಹಾಯವಾಣಿಗಳ ಮೂಲಕ).

ಇದರ ಜೊತೆಗೆ, ಶಿಕ್ಷಕರನ್ನು ಶಾಲೆಯೊಂದಕ್ಕೆ ನೇಮಿಸಿ, (ರಾಜ್ಯ ಅಥವಾ ಜಿಲ್ಲಾ ತಂಡದಲ್ಲಲ್ಲ) ಅವರನ್ನು ಮಕ್ಕಳಿಗೆ ಉತ್ತರದಾಯಿಯಾಗಿಸತಕ್ಕದ್ದು. ಶಿಕ್ಷಕರು ಯಾವ ಮಕ್ಕಳಿಗೆ ಜವಾಬ್ದಾರರಾಗಿರುತ್ತಾರೋ ಅವರ ಕಲಿಕೆಯ ಮಟ್ಟಕ್ಕೂ ಮತ್ತು ಶಿಕ್ಷಕರ ವರ್ಗಾವಣೆ, ಮುಂಬಡ್ತಿ ಮತ್ತಿತರ ವೃತ್ತಿಯ ಅವಕಾಶಗಳಿಗೂ ಸಂಬಂಧವಿರಬೇಕು. ಅದೇ ರೀತಿಯಲ್ಲಿ ಶಿಕ್ಷಕರ ಸಾಮರ್ಥ್ಯ ಮತ್ತು ವಿಷಯದ ಕುರಿತಾದ ತಿಳಿವಳಿಕೆಗೂ ಶಿಕ್ಷಕ ತರಬೇತಿಗೂ ಸಂಬಂಧವಿರಬೇಕು. ತರಬೇತಿಗೆ ಸಂಬಂಧಿಸಿದ ನಿರ್ಧಾರಗಳನ್ನು ಸಮೂಹದ ಅಥವಾ ಹೆಚ್ಚೆಂದರೆ ವಿಭಾಗದ ಹಂತದಲ್ಲಿ ತೆಗೆದುಕೊಳ್ಳಬೇಕು. ಸರ್ಕಾರವು ರಚಿಸಿದ ವಿಭಾಗ ಅಥವಾ ಸಮೂಹ ಮಟ್ಟದ ಶೈಕ್ಷಣಿಕ ಅಂಗಗಳು ತಮ್ಮ ಅನುಕ್ರಮ ಪ್ರದೇಶಗಳಲ್ಲಿನ ಮಕ್ಕಳ ಕಲಿಕಾಮಟ್ಟಕ್ಕೆ ಉತ್ತರದಾಯಿಯಾದಾಗ ಮಾತ್ರ ಇದು ಸಾಧ್ಯವಾಗುತ್ತದೆ. ಕಲಿಕೆಯ ಜವಾಬ್ದಾರಿಯನ್ನು ಶೈಕ್ಷಣಿಕ ಅಧಿಕಾರಿಗಳು ವಹಿಸಿಕೊಳ್ಳಬೇಕಾಗುತ್ತದೆ.

ಇಂತಹ ವ್ಯವಸ್ಥೆಯ ಪರಿಣಾಮವೇನೆಂದರೆ, ಮಕ್ಕಳಿಗೆ ತಮ್ಮ ಜ್ಞಾನ ಮತ್ತು ಕೌಶಲ್ಯಗಳನ್ನು ಪ್ರಾಯಶಃ ವಿಭಾಗ ಅಥವಾ ಸಮೂಹ ಮಟ್ಟದ ಸಂಪನ್ಮೂಲ ಕೇಂದ್ರಗಳ ಬೆಂಬಲವನ್ನು ಪಡೆದಿರುವ ಒಂದು ನಿರಂತರ ಮತ್ತು ಸಮಗ್ರ ಮೌಲ್ಯಮಾಪನ ವ್ಯವಸ್ಥೆಯ ಮೂಲಕ ಪರೀಕ್ಷೆಗೊಡ್ಡಲು ನಿಯತ ಅವಕಾಶಗಳನ್ನು ನೀಡಲಾಗುತ್ತದೆ. ನಾವು ಕಲಿಕೆಯ ಬಗ್ಗೆ ನಮ್ಮ ಗಮನವನ್ನು ಹರಿಸದಿದ್ದರೆ, ಸರ್ಕಾರವು ಶಾಲೆಗಳ ಕ್ರಮಬದ್ಧ ಕಾರ್ಯನಿರ್ವಹಣೆಯನ್ನು ಖಚಿತಪಡಿಸುವ ನಿಟ್ಟಿನಲ್ಲಿ ಕೆಲಸ ಮಾಡುವುದಿಲ್ಲ. ಒಟ್ಟಾರೆ ಮುಖ್ಯ ಸಂಗತಿಯೆಂದರೆ ಮಕ್ಕಳು ತಮಗೆ ವಿದ್ಯೆಯನ್ನು ಕಲಿಸುವ ನಿಟ್ಟಿನಲ್ಲಿ ತಮಗಿರುವ ಹಕ್ಕು, ತಮಗೆ ಕಲಿಯಲಿಕ್ಕೆ ಇರುವ ಹಕ್ಕು ಇವುಗಳನ್ನು ಮನವರಿಕೆ ಮಾಡಿಕೊಳ್ಳುವುದನ್ನು ಇಡಿಯ ಶಿಕ್ಷಣ

ವ್ಯವಸ್ಥೆಯು ಖಚಿತಪಡಿಸಬೇಕು. ಶಿಕ್ಷಣದ ಹಕ್ಕು ಸದುದ್ದೇಶದ, ಕೇವಲ ಕಾಗದದ ಮೇಲಿನ ಮತ್ತೊಂದು ಶಾಸನವಾಗಿ ಕೊನೆಗೊಳ್ಳಬಹುದು.